**OS.No.**18/2022 **PW**-2

**ದಿನಾಂಕಃ 16.07.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆ ವಾದಿಯ ಪರ ಶ್ರೀ. ಎಂ ಇ ಎಸ್ ವಕೀಲರಿಂದಃ**

ನಾನು ನನ್ನ ಮುಖ್ಯ ವಿಚಾರಣೆಯ ಸಲುವಾಗಿ ಪ್ರಮಾಣ ಪತ್ರವನ್ನು ಸಲ್ಲಿಸುತ್ತಿದ್ದೇನೆ. ಅದರಲ್ಲಿ ಹೇಳಿರುವ ಸಂಗತಿಗಳು ಸತ್ಯವಾಗಿರುತ್ತವೆ. ಅವುಗಳನ್ನು ಓದಿ ತಿಳಿದುಕೊಂಡು ಸಹಿ ಮಾಡಿರುತ್ತೇನೆ. ಸದರಿ ಅಂಶಗಳನ್ನು ವಕೀಲರಿಗೆ ನಾನೇ ಹೇಳಿ ಬರೆಸಿರುತ್ತೇನೆ.

**ಪಟೀ ಸವಾಲು ಪ್ರತಿವಾದಿಯ ಪರ ಶ್ರೀ ಎ ಎಸ್ ಎಂ ವಕೀಲರಿಂದಃ**

ವಾದಿ ಈ ಪ್ರಕರಣವನ್ನು ಯಾವ ಉದ್ದೇಶಕ್ಕಾಗಿ ಸಲ್ಲಿಸಿದ್ದಾರೆ ಎಂದರೆ ಸಾಕ್ಷಿ ನನ್ನ ಅಕ್ಕ ಜಯಮ್ಮಾಳಿಗೆ ಅರಿಶಿಣ ಕುಂಕುಮಕ್ಕಾಗಿ ಹಣ ಕೊಟ್ಟಿದ್ದೆವು ಅದರಲ್ಲಿ ಅವರು ಜಮೀನು ಖರೀದಿ ಮಾಡಿರುತ್ತಾಳೆ , ಸದರಿ ಜಮೀನಿನ ವಿಷಯವಾಗಿ ವಾದಿ ಈ ಕೇಸನ್ನು ಹಾಕಿರುತ್ತಾರೆ. ಜಯಮ್ಮ ಅವರು ಖರೀದಿ ಮಾಡಿದ ಜಮೀನಿನ ಸರ್ವೆ ನಂಬರ್ ನನಗೆ ಹೇಳಲು ಬರುವುದಿಲ್ಲ ಆದರೆ ನಾವು ಕೊಟ್ಟ ಹಣದಲ್ಲಿ 4 ಎಕರೆ ಹಾಗೂ 2 ಎಕರೆ 30 ಗುಂಟೆ ಜಮೀನನ್ನು ಅವಳು ಖರೀದಿ ಮಾಡಿರುತ್ತಾರೆ. ಸದರಿ ಜಮೀನು ಕೃಷ್ಣಾಪುರ ಗ್ರಾಮದ ಪಕ್ಕದಲ್ಲಿ ಬರುತ್ತದೆ.

ನಾನು ಜಯಮ್ಮಳಿಗೆ ತಮ್ಮನಾಗಬೇಕು. ಜಯಮ್ಮಳನ್ನು ಮದುವೆ ಮಾಡಿ ಕೊಟ್ಟಾಗ ನನಗೆ 28 ರಿಂದ 30 ವರ್ಷ ವಯಸು ಆಗಿತ್ತು . ಆಗ ನನ್ನ ಮದುವೆ ಆಗಿತ್ತು. ಜಯಮ್ಮಳಿಗೆ ಮದುವೆ ಮಾಡಿದಾಗ ಅವಳಿಗೆ ಸುಮಾರು 22 ವರ್ಷ ವಯಸ್ಸು ಆಗಿತ್ತು . ನಮಗೆ ಹತ್ತು ಎಕರೆ ಜಮೀನು ಇದೆ. ಮದುವೆ ಮಾಡಿ ಕೊಡುವಾಗಲೂ ನಮಗೆ 10 ಎಕರೆ ಜಮೀನು ಇತ್ತು ಇತ್ತೀಚೆಗೆ ನಾವು 2 ಎಕರೆ ಖರೀದಿ ಮಾಡಿದ್ದೇವು . 10 ಎಕರೆಗೆ ಸಂಬಂಧ ಪಟ್ಟಂತೆ ಪಹಣಿಗಳನ್ನು ಹಾಜರಿ ಪಡಿಸಲು ನನಗೆ ಯಾವುದೇ ತೊಂದರೆ ಇಲ್ಲ. ಜಯಮ್ಮಳ ಗಂಡ

ವ್ಯವಸಾಯ ಮಾಡಿಕೊಂಡಿದ್ದರು. ಜಯಮ್ಮಳ ಗಂಡನಿಗೆ ಪಿತ್ರಾರ್ಜಿತ ವಾಗಿ 6-7 ಎಕರೆ ಜಮೀನು ಇತ್ತು. ಗುಂಡೇ ಗೌಡರಿಗೆ ಪಿತ್ರಾರ್ಜಿತ ಆಸ್ತಿ ಬಿಟ್ಟು ಬೇರೆ ಆಸ್ತಿ ಇರುವುದಿಲ್ಲ , ನಾವು ಅರಿಶಿಣ ಕುಂಕುಮಕ್ಕಾಗಿ ಕೊಟ್ಟ ಹಣದಿಂದ ಜಯಮ್ಮ ಆಸ್ತಿ ಖರೀದಿ ಮಾಡಿರುತ್ತಾರೆ .

ನಾವು ಅರಿಶಿಣ ಕುಂಕುಮಕ್ಕಾಗಿ ಯಾವುದೇ ಹಣವನ್ನು ಕೊಟ್ಟಿಲ್ಲ , ಗುಂಡೇ ಗೌಡರೇ ಹಣ ಕೊಟ್ಟು ಅವರ ಹೆಂಡತಿ ಹೆಸರಿನಲ್ಲಿ ಆಸ್ತಿಯನ್ನು ಖರೀದಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಆಸ್ತಿಯನ್ನು ಯರಿಂದ ಖರೀದಿ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ . ಗುಂಡೇ ಗೌಡರಿಗೆ ಬೇರೆ ಕಡೆಗೆ ಆಸ್ತಿ ಇದ್ದು, ಅದು ನಾಲೆಗೆ ಹೋಗಿದದ್ದ ರಿಂದ ಪರಿಹಾರ ಬಂದಿತ್ತು ಅದರಿಂದ ದಾವಾ ಆಸ್ತಿಯನ್ನು ಖರೀದಿ ಮಾಡಿರುತ್ತಾರೆ ಎಂದರೆ ಸರಿಯಲ್ಲ . 1986ನೇ ಇಸವಿಯಲ್ಲಿ ನಾವು ಅರಿಶಿಣ ಕುಂಕುಮಕ್ಕಾಗಿ ಹಣವನ್ನು ಕೊಟ್ಟಿದ್ದೇವು . ಜಯಮ್ಮಾಳ ಮದುವೆ ಯಾವಾಗ ಆಗಿರುತ್ತದೆ ಎಂದು ಗೊತ್ತಿಲ್ಲ .

ಕರುಳು ಸಂಬಂಧಿ ರೋಗದಿಂದ ಜಯಮ್ಮ ತೀರಿ ಕೊಂಡಿರುತ್ತಾರೆ. 6 ತಿಂಗಳು ವಪರ್ಷಗಳ ಕಾಲ ಜಯಮ್ಮ ಖಾಯಿಲೆ ಬಿದ್ದಿದ್ದರು . ಜಯಮಂಳಿಗೆ ಆರೋಗ್ಯ ಸರಿ ಇರಲ್ಲಿಲ್ಲ ಹೀಗಾಗಿ ಅವರಿಗೆ ದುಡಿಯುವ ಶಕ್ತಿ ಇರಲ್ಲಿಲ್ಲ, ನಾವು ಸಹ ಯಾವುದೇ ಹಣ ಕಾಸಿನ ಸಹಾಯವನ್ನು ಮಾಡಿಲ್ಲ , ದಾವಾ ಆಸ್ತಿಯನ್ನು ಗುಂಡೇ ಗೌಡರೇ ಹಣ ಕೊಟ್ಟು ಖರೀದಿ ಮಾಡಿಸಿದ್ದರು ಎಂದರೆ ಸರಿಯಲ್ಲ. ಜಯಮ್ಮಳಿಗೆ ಮಾಂಗಲ್ಯ ಸರ, ಓಲೆ ಚುಮುಕಿ ಮತ್ತು ಡಾಬು ಕೊಟ್ಟಿದ್ದೇವು , ಎಷ್ಟು ಗ್ರಾಂ ಚಿನ್ನ ಎಂದು ನಿಖರವಾಗಿ ನನಗೆ ಹೇಳಲು ಬರುವುದಿಲ್ಲ .

ಸಾಕ್ಷಿ ಹೇಳಲು ಬರುವಂತೆ ನನಗೆ ಹೇಮರಾಜು ಹೇಳಿದ್ದರು. ನನಗೆ ನ್ಯಾಯಾಲಯದಿಂದ ಯಾವುದೇ ಸಮನ್ಸ್ ಬಂದಿರುವುದಿಲ್ಲ . ಜಯಮ್ಮ ತೀರಿಕೊಂಡ ನಂತರ ಗುಂಡೇ ಗೌಡರಿಗೆ 2ನೇ ಮದುವೆಯಾಗಿದ್ದು ಅವರ ಹೆಸರು ಮಲಿಗಮ್ಮ ಎಂದರೆ ಸರಿ . ಜಯಮ್ಮನವರಿಗೆ 4 ಜನ

ಮಕ್ಕಳಿದ್ದರು ಎಂದರೆ ಸರಿ . 4 ಜನ ಮಕ್ಕಳನ್ನು ಸಾಕುವ ಸಲುವಾಗಿಯೇ ನಾನೇ ಪ್ರತಿವಾದಿಯನ್ನು ಗುಂಡೇ ಗೌಡರಿಗೆ ಮದುವೆ ಮಾಡಿಸಿದ್ದೆ ಎಂದರೆ ಸರಿಯಲ್ಲ. ಮದುವೆ ಮಾಡಿಸುವ ಸಮಯಕ್ಕೆ ಗುಂಡೇ ಗೌಡರು ಖರೀದಿದಸಿದ ಆಸ್ತಿಯನ್ನು ನಿಮ್ಮ ಹೆಸರಿಗೆ ರಿಜಿಸ್ಟ್ರೇಶನ್ ಮಾಡಿಸುತ್ತೇನೆ ಎಂದು ಹೇಳಿ ಪ್ರತಿವಾದಿಯನ್ನು ಗುಂಡೇ ಗೌಡರಿಗೆ ಮದುವೆ ಮಾಡಿಸಿದರು ಎಂದರೆ ಸರಿಯಲ್ಲ.

ಜಯಮ್ಮ ಅವರ ಹೆಸರಿಗೆ ಆಸ್ತಿ ಇದೆ ಎಂದು ನಿಮಗೆ ಯಾವಾಗ ಗೊತ್ತಾಯಿತು ಎಂದರೆ ಸಾಕ್ಷಿ ರಿಜಿಸ್ಟ್ರೇಶನ್ ವೇಳೆಗೆ ನನ್ನ ತಂದೆಯು ಸಹ ಹಣ ತೆಗೆದುಕೊಂಡು ಹೋಗಿದ್ದರು ಹೀಗಾಹಿ ಆಗಲೇ ನಮಗೆ ವಿಷಯ ಗೊತ್ತಿತ್ತು ಎಂದು ನುಡಿಯುತ್ತಾರೆ . ನಾವು ರಿಜಿಸ್ಟ್ರೇಶನ್ ಕಛೇರಿಗೆ ಹೋಗಿಲ್ಲ, ಒಂದು ವೇಳೆ ಹೋಗಿದ್ದರೆ ನನ್ನ ತಂದೆ ಕ್ರಯಪತ್ರದಕ್ಕೆ ಸಾಕ್ಷಿ ಅಂತ ಸಹಿ ಮಾಡುತ್ತಿದ್ದರು ಎಂದರೆ ಸಾಕ್ಷಿ ನನ್ನ ತಂದೆ ಹಣ ತೆಗೆದುಕೊಂಡು ಹೋಗಿದ್ದು ನಿಜ ಇದೆ, ಆದರೆ ಸಾಕ್ಷಿ ಅಂತ ಊರಿನವರು ಸಹಿ ಹಾಕಿರುತ್ತಾರೆ ಎಂದು ನುಡಿಯತ್ತಾರೆ. ಕ್ರಯಪತ್ರ ಯಾವ ಸಬ್ ರಿಜಿಸ್ಟರ್ ಕಛೇರಿಯಲ್ಲಿ ನೊಂದಣಿಯಾಗಿದೆ ಎಜಂದು ನನಗೆ ಗೊತ್ತಿಲ್ಲ . ಹಣವನ್ನು ಯಾರು ಯಾರಿಗೆ ಕೊಟ್ಟರು, ಆ ಸಮಯಕ್ಕೆ ಯಾರು ಯಾರು ಇದ್ದರು ನನಗೆ ಗೊತ್ತಿಲ್ಲ ಎಂದರೆ ಸರಿ . ಆಸ್ತಿ ಖರೀದಿ ಆದಂ ವಿಷಯವನ್ನು ನನಗೆ ನನ್ನ ತಂದೆ ಹೇಳಿರುತ್ತಾರೆ. ನನ್ನ ತಂದೆಯ ಯಾವುದೇ ಹಣವನ್ನು ಕೊಟ್ಟಿಲ್ಲ , ರಿಜಿಸ್ಟ್ರೇಶನ್ ಗೂ ಸಹ ಅವರು ಬಂದಿಲ್ಲ , ವಾದಿಗೆ ಸಹಾಯ ಮಾಡಲು ನಾನು ಸುಳ್ಳು ಹೇಳುತಿದ್ದೇನೆ ಎಂದರೆ ಸರಿಯಲ್ಲ.

ಜಯಮ್ಮ ತೀರಿಕೊಂಡ ನಂತರ ಮಕ್ಕಳನ್ನು ಯಾರು ಸಾಕಿದರು ಎಂದರೆ ಸಾಕ್ಷಿ ನಾವು ಮತ್ತು ನನ್ನ ತಂದೆ ನೋಡಿಕೊಳ್ಳುತ್ತಿದ್ದೆವು, ಎಂದು ನುಡಿಯುತ್ತಾರೆ. ಪ್ರತಿವಾದಿ ಹಾಗೂ ಗುಂಡೇಗೌಡರು ಮಕ್ಕಳೊಂದಿಗೆ ಒಂದೇ ಮನೆಯಲ್ಲಿ ವಾಸವಾಗಿದ್ದರು ಎಂದರೆ ಸರಿಯಲ್ಲ .

ಮಕ್ಕಳು ಚಿಕ್ಕವರಾಗಿದದ್ದರಿಂದ ಪ್ರತಿವಾದಿಯೆ ಅವರ ಊಟ ಉಪಚಾರಗಳನ್ನೆಲ್ಲಾ ನೋಡಿಕೊಂಡು ಅವರನ್ನು ಜೋಪಾನ ಮಾಡಿರುತ್ತಾರೆ ಎಂದರೆ ಸರಿಯಲ್ಲ . ಎಷ್ಟು ಹಣಕ್ಕೆ ಆಸ್ತಿ ಖರೀದಿ ಆಗಿತ್ತು ಎಂದು ನನಗೆ ಗೊತ್ತಿಲ್ಲ.

ಪ್ರತಿವಾದಿಗೆ ಇಬ್ಬರು ಜನ ಮಕ್ಕಳಿರುತ್ತಾರೆ. ಗುಂಡೇಗೌಡರ ಪಿತ್ರಾರ್ಜಿತ ಮತ್ತು ಸ್ವಯಾರ್ಜಿತ ಆಸ್ತಿ ಎರಡರಲ್ಲೂ ಗುಂಡೇಗೌಡರ ಮಕ್ಕಳಿಗೆ ಮತ್ತು ಪ್ರತಿವಾದಿಯ ಮಕ್ಕಳಿಗೆ ಪಾಲು ಎಂದರೆ ಸಾಕ್ಷಿ ಪಿತ್ರಾರ್ಜಿತ ಆಸ್ತಿಯಲ್ಲಿ ಇಬ್ಬರಿಗೂ ಸಮ ಪಾಲು ಇದೆ ಎಂದು ನುಡಿಯುತ್ತಾರೆ. ಜಯಮ್ಮ ತೀರಿಕೊಂಡ ನಂತರ ಗುಂಡೇಗೌಡರೇ ಒಪ್ಪಿಗೆ ನೀಡಿ ದಾವಾ ಆಸ್ತಿಯ ಖಾತೆಯನ್ನು ಪ್ರತಿವಾದಿಯ ಹೆಸರಿಗೆ ಮಾಡಿರುತ್ತಾರೆ ಎಂದರೆ ಸಾಕ್ಷಿ ಯಾರಿಗೆ ಖಾತೆ ಮಾಡಿರುತಗ್ತಾರೆ ಎಂದು ಗೊತ್ತಿಲ್ಲ ಆದರೆ ಆಸ್ತಿ ಜಯಮ್ಮಳದ್ದು ಎಂದು ನುಡಿಯತ್ತಾರೆ . ಗುಂಡೇಗೌಡರೇ ದಾವಾ ಆಸ್ತಿಯನ್ನು ಉತ್ತಿ ಬಿತ್ತಿ ಮಾಡುತಿತದ್ದರು ಎಂದರೆ ಸಾಕ್ಷಿ ಮಕ್ಕಳು ಚಿಕ್ಕವರಿದ್ದಾಗ ಮಾಡುತ್ತಿದ್ದರು ಆದರೆ ದೊಡ್ಡವರಾದ ಮೇಲೆ ಮಕ್ಕಳೇ ಮಾಡುತ್ತಿದ್ದಾರೆ ಎಂದು ನುಡಿಯುತ್ತಾರೆ . ಪ್ರತಿವಾದಿಯನ್ನು ಮದುವೆಯಾದಾಗಿನಿಂದಲೂ ದಾವಾ ಆಸ್ತಿಯ ಸ್ವಾಧೀನದಲ್ಲಿ ಪ್ರತಿವಾದಿ ಮತ್ತು ಅವರ ಮಕ್ಕಳಿರುತ್ತಾರೆ ಎಂದರೆ ಸರಿಯಲ್ಲ. ಗುಂಡೇಗೌಡರ ಸ್ವಯಾರ್ಜಿತ ಆಸ್ತಿಯಾಗಿದ್ದರಿಂದ ಅದನ್ನು ಗುಂಡೇಗೌಡರೇ ಪ್ರತಿವಾದಿ ಹೆಸರಿಗೆ ಖಾತೆ ಮಾಡಿಸಿದ್ದರಿಂದ, ದಾವಾ ಆಸ್ತಿ ಪ್ರತಿವಾದಿಯ ಸ್ವಯಾರ್ಜಿತ ಆಸ್ತಿ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಬಗ್ಗೆ ಯಾವುದೇ ಮಾಹಿತಿ ಇರದೇ ಇದ್ದರು ಸಹ ನನ್ನ ಅಕ್ಕನ ಮಗನಾಗಿದ್ದರಿಂದ ಆತನಿಗೆ ಸಹಾಯ ಮಾಡುವ ಸಲುವಾಗಿ ಸುಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ಪ್ರತಿವಾದಿದ ಮತ್ತು ಅವರ ಮಕ್ಕಳಿಗೂ ಸಹ ಸಮಾನ ಹಕ್ಕಿದೆ ಎಂದರೆ ಸರಿಯಲ್ಲ.

**OS.No**.18/2022 **PW**-2

**ಮರು ವಿಚಾರಣೆ ಇಲ್ಲಃ**

ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ. ಹೇ. ಕೇ. ಸ. ಇ. ಒ,

(ಶ್ರೀಮತಿ. ನಿವೇದಿತಾ ಮಹಾಂತೇಶ್ ಮುನವಳ್ಳಿಮಠ್)
ಹಿ.ವ್ಯ.ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ರವರು ಹೊಳೆನರಸೀಪುರ.